ಮಾತನಾಡುವುದಾದರೆ ಮಾತನಾಡಿ. ಏನಾದರೂ ಒಂದು ತೀರ್ಮಾನಕ್ಕೆ ಬರುವುದಾದರೆ ಅಲ್ಲಿ ಬನ್ನಿ. It is not binding on anybody.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿ) : ಊಟ ಮುಗಿಸಿಕೊಂಡು ಬಂದು ನಿಮ್ಮ ಛೇಂಬರಿನಲ್ಲಿ ಸಭೆ ಸೇರೋಣ.

MR. SPEAKER : We will adjourn for lunch now.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಮಾಡಿದರೆ ಏನಾಗುತ್ತದೆ ? ಊಟ ಪ್ರತಿ ದಿನ ಮಾಡುವುದಿಲ್ಲವೇ ?

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇವತ್ತು ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಆದ್ದರಿಂದ, ಈ ವಿಷಯಗಳು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬರಬೇಕಾಗಿರುವುದರಿಂದ, ಮಾನ್ಯ ಮುಖ್ಯಮಂತ್ರಿಗಳು ಇರಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ಈಶ್ವರಪ್ಪನವರು ಏನು ಹೇಳುತ್ತಾರೆಂದರೆ, ಇವತ್ತು ಕಡೆಯ ದಿವಸವಾಗಿರುವುದರಿಂದ ಬಹಳಷ್ಟು ಮುಖ್ಯ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಮಧ್ಯಾಹ್ನದ ನಂತರ ಸಭೆಯಲ್ಲಿರಬೇಕೆಂದು ಅವರು ಹೇಳುತ್ತಿದ್ದಾರೆ. ನಾನು ನಿಮಗೆ ಹೇಳುತ್ತೇನೆಂದು ಹೇಳಿದ್ದೇನೆ. ನಾವು ಒಂದು ಗಂಟೆ ಬಿಟ್ಟು ಸೇರೋಣ. ಈಗ ನಾವು ಊಟಕ್ಕೆ ಅಡ್ಜರ್ನ್ ಮಾಡೋಣ. 10 ನಿಮಿಷದ ನಂತರ ಅವರು ನಮ್ಮ ಛೇಂಬರಿಗೆ ಬರುತ್ತಾರೆ. If you can arrive at some consensus, let us try to work it out. ಈಗ ಸಭೆಯನ್ನು ಮುಂದೂಡಿ ಪುನಃ 3 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 2 ಗಂಟೆ 5 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3-00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸನ್ಮಾನ್ಯ ವಿರೋಧಪಕ್ಷದ ಸದಸ್ಯರುಗಳು ಧರಣಿಯಲ್ಲಿದ್ದರು) : ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್‌ರವರು ಸಭಾಧ್ಯಕ್ಷ ಪೀಠವನ್ನು ಅಲಂಕರಿಸಿದರು, ಸಭೆಯು 3-50 ಗಂಟೆಗೆ ಪುನರ್ ಸಮಾವೇಶಗೊಂಡಿತು.)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ಕೊನೆಯ ದಿನ. ಬೇರೆ ಬೇರೆ ವಿಚಾರಗಳ ಬಗ್ಗೆ ನಾವು ಇಲ್ಲಿ ಧರಣಿ ಮಾಡಿ ಪ್ರತಿಭಟಿಸಬೇಕಾಗಿದೆ..

ಅಧ್ಯಕ್ಷರು : ಈಗ ಇದು ಮುಗಿಯಲಿ. ಬಹಳ ಜನ ಮೆಂಬರ್ಸ್ ನಾಲ್ಕೈದು ದಿನಗಳಿಂದ ಶೂನ್ಯವೇಳೆ ಅವಕಾಶ ಪಡೆದುಕೊಳ್ಳಲಾಗಲಿಲ್ಲ. ಅವರುಗಳು ರೈಸ್ ಮಾಡುವ ವಿಚಾರಗಳು ಅನೇಕವಿವೆ. ಮೇಲಿಂದ ಮೇಲೆ ನೀವೇ ಮಾತನಾಡುತ್ತಾ ಇದ್ದರೆ ಅವರುಗಳು ಬೇಸರ ಮಾಡಿಕೊಳ್ಳುತ್ತಾರೆ. ದಯವಿಟ್ಟು ಏನಾದರೂ ಒಂದು ಇತ್ಯರ್ಥವನ್ನು ಮಾಡಿಕೊಳ್ಳಿ. ಭೈರೇಗೌಡರು, ನಾಣಯ್ಯನವರು, ಬಚ್ಚೇಗೌಡರು, ತಾವುಗಳು ಸೇರಿ ಒಂದು ಇತ್ಯರ್ಥವನ್ನು ಮಾಡಿ. ನನಗೆ ಇದು ಸರಿ ಕಾಣುವುದಿಲ್ಲ.